ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

*ಉಸಿರಾಟಕ್ಕೂ ಪುರುಸೊತ್ತಿಲ್ಲದ ಕೆಲಸ ಯಾವುದು?*



ನೀರಿನೊಳಗಿನ ಈಜಾಟ!

ಪಿ.ಎಸ್. ಶ್ರೀವತ್ಸ, ಬೆಂಗಳೂರು

*ನೈಜ ಮರೆವಿಗೂ, ಕಳ್ಳ ಮರೆವಿಗೂ ಇರುವ ವ್ಯತ್ಯಾಸವೇನು?*

ಒಂದು ಆಪತ್ತು, ಇನ್ನೊಂದು ಆಪದ್ಬಾಂಧವ!

ಅರಕೆರೆ ಪಿ. ಸುರೇಶ್, ಭದ್ರಾವತಿ

*ಸತ್ತ ಮೇಲೆ ಸ್ವರ್ಗ ಸೇರಬೇಕು ಎಂದರೆ ಏನು ಮಾಡಬೇಕು?*

ಅನ್ಯರು ನಿಮ್ಮಿಂದ ಸೊರಗದಂತೆ ಜೀವಿಸಬೇಕು!

ಮನೋರಮಾ ಪ್ರಭು, ಕಾಸರಕೋಡ

*ಪ್ರೀತಿಯ ಸಂಕೇತ ತಾಜಮಹಲ್ಲು; ದ್ವೇಷದ ಸಂಕೇತ?*

ಕಟಕಟ ಕಡಿಯುವ ಹಲ್ಲು!

ಕೆ.ಎಂ. ಲಿಂಗರಾಜು, ನಂಜನಗೂಡು

*ಕಾಣುವ ಕೈಗೂ, ಕಾಣದ ಕೈಗೂ ಇರುವ ವ್ಯತ್ಯಾಸವೇನು?*



ಕಾಣುವ ಕೈ ಪ್ರಧಾನಿ, ಕಾಣದ ಕೈ ಹೈಕಮಾಂಡ್.

ನೇ.ಗೋ.ಭ, ಕುಕ್ಕೆ ಸುಬ್ರಹ್ಮಣ್ಯ

*ವಿಧವೆ ಕಾಲಿಗೆರಗಿ ನಮಸ್ಕರಿಸಿದಾಗ ಏನೆಂದು ಆಶೀರ್ವದಿಸಲಿ ರಾಮ್ ಸರ್?*

ಸೆಕೆಂಡ್ ಟೈಂ ಲಕ್ಕಿಯಾಗಿ ಸೂಪರ್ ಸಂಸಾರಿಯಾಗು ಎಂದು!

ಹಾಡ್ಯ ಬಿ. ಜಯಾನಂದ, ಮೈಸೂರು

*ಕಾಲ ಕಳೆಯಲು ಕೆಲವರಿಗೆ ಸಂಗತಿ ಸಾಕು, ಕೆಲವರಿಗೆ ಸಂಗಾತಿ ಬೇಕು. ನಿಮಗೆ?*

ಅವರಿವರ ಸಂಗಾತಿಗಳ ಸಂಗತಿಗಳು ಬೇಕು.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

*ಅತಿಯಾದ ಅಮೃತ ವಿಷವಂತೆ. ಅತಿಯಾದ ಪ್ರೀತಿ?*

ಎಷ್ಟೇ ಅತಿಯಾದರೂ ಸ-ರಸವೇ.

ಆರ್. ಮಧುಸೂದನ್, ಹಾಸನ

*ಎಂಬತ್ತರ ಹರೆಯದ ಅಜ್ಜಿಯೊಬ್ಬರು ಕಾಲಿಗೆ ಬೆಳ್ಳಿಗೆಜ್ಜೆಯನ್ನು ಹಾಕಿಕೊಂಡು ಓಡಾಡುತ್ತಿದ್ದಾರಲ್ಲ...?*

ಗೆಜ್ಜೆಯನ್ನು ಕದಿಯುವ ಆಸೆಯಿಂದಾದರೂ ಕಾಲು ಒತ್ತಿಯಾರು ಎಂಬ ದೂರದ ಆಸೆ!

ಪವನ್ ಕುಮಾರ್ ಸರೋವರ್, ಬಳ್ಳಾರಿ

*ಪ್ರಾಣಿಗಳ ಹರಾಜಿಗೂ, ಕ್ರಿಕೆಟ್ ಆಟಗಾರರ ಹರಾಜಿಗೂ ಏನು ವ್ಯತ್ಯಾಸ?*

ಹರಾಜಿನಿಂದ ಪ್ರಾಣಿಗಳು ಬಲಿಯಾಗುತ್ತವೆ, ಕ್ರಿಕೆಟಿಗರು ಬಲಿಯುತ್ತಾರೆ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

*ದೇಶದಲ್ಲಿ ನಮ್ಮನ್ನು ಮುಂದೆ ಬನ್ನಿ ಎಂದು ಕರೆಯುವ ವ್ಯಕ್ತಿ ಯಾರು ಸರ್?*

ಲಿಫ್ಟ್ ಆಪರೇಟರ್ – ನೀವು ಇಳಿಯುವ ಫ್ಲೋರ್ ಬಂದಿದ್ದು ಅನ್ಯ ಫ್ಲೋರ್‌ಗಳವರಿಗಿಂತ ನೀವು ಹಿಂದೆ ನಿಂತಿದ್ದಾಗ!

ಮಹಾವೀರ ಕಾಸರ, ಶಿವಮೊಗ್ಗ

*ಆರೋಗ್ಯದ ಬಗ್ಗೆ ಅನೇಕ ಯೋಜನೆಗಳಿದ್ದರೂ ಜನರಿಗೆ ಉಪಯೋಗವಾಗಿಲ್ಲವಲ್ಲ?*

ಆ ಯೋಜನೆಗಳಿಗೇ ವಾಸಿಯಾಗದ ರೋಗ ಬಡಿದಿರುವುದರಿಂದ!

ಪಿ.ಜೆ. ರಾಘವೇಂದ್ರ, ಮೈಸೂರು

*‘ಗಾಂಧಿ’ ಹೆಸರನ್ನು ಮೂರನೇ ದರ್ಜೆಗೆ ಹೋಲಿಸುವುದೇಕೆ?*

ಅದು ಮಹಾತ್ಮರಿಗೆ ಹೋಲಿಸಿದ್ದಲ್ಲ; ಈಗಿನ ಹಲವಾರು ಗಾಂಧಿಗಳು ಅದೇ ದರ್ಜೆಯಾದ್ದರಿಂದ...

ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

*ಲಾರಿ ಅಡ್ಡಾದಿಡ್ಡಿಯಾಗಿ ಚಲಿಸಿ ಮದ್ಯದ ಅಂಗಡಿಗೆ ನುಗ್ಗಿತಲ್ಲಾ...?*

ಡ್ರೈವರ್ ಡೀಸೆಲ್ ಹೊಟ್ಟೆಗೆ ಹಾಕಿಕೊಂಡು ಹೆಂಡ ಟ್ಯಾಂಕಿಗೆ ತುಂಬಿಸಿಬಿಟ್ಟಿದ್ದನಂತೆ!

## ಬಹುಮಾನಿತ ಪ್ರಶ್ನೆ

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್

*ಉಪಕಾರಕ್ಕೂ, ಉಪ್ಪುಕಾರಕ್ಕೂ ಏನು ವ್ಯತ್ಯಾಸ?*

ಉಪಕಾರ ಬಾಳಿನ ಜೀವಾಳ; ಉಪ್ಪುಕಾರ ಬಾಳಕದ ಜೀವಾಳ!

ದಿನೇಶ್ ಗುಡ್ಡದೂರು, ಆಲ್ದೂರು

*ಕಾರಿಗೂ, ಬಾರಿಗೂ ಇರುವ ವ್ಯತ್ಯಾಸ?*

ಕಾರ್ ವೇಗಕ್ಕೆ ಆಸ್ಪದ ಕೊಡುತ್ತದೆ, ಬಾರ್ ಆವೇಗಕ್ಕೆ!

ರೂಪಕವಿ, ಚಿತ್ರದುರ್ಗ

*ಬೆಂಗಳೂರಿನಲ್ಲಿ ಹರಿಶ್ಚಂದ್ರ ಘಾಟ್ ಹೊರತಾಗಿ ಸಿಕ್ಕಬಹುದಾದ ಉಚಿತ ನಿವೇಶನ ಯಾವುದು?*

ವಿಲ್ಸನ್ ಗಾರ್ಡನ್! ಇಲ್ಲಿ ನಿವೇಶನವಷ್ಟೇ ಅಲ್ಲದೆ ವಿದ್ಯುತ್ತೂ ದೊರೆಯುತ್ತದೆ!

ಡಿ. ದೊಡ್ಡಲಿಂಗೇಗೌಡ, ಕೊಳ್ಳೇಗಾಲ

*ಈಗೀಗ ಹೆಣ್ಣಿನ ಬೆನ್ನು ಬೆತ್ತಲಾಗುತ್ತಿರುವುದೇಕೆ?*



ಬೆಂ–ಬಲ ಹೆಚ್ಚಿಸಿಕೊಳ್ಳಲು

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ರಾಜಕಾರಣಿಗಳಿಗೆ ಅನೈತಿಕ ಸಂಬಂಧ ಇರುವುದು ಒಂದು ಅರ್ಹತೆಯೇ ಆಗಿಹೋಗಿದೆಯಲ್ಲಾ ರಾಂ?*

ತಪ್ಪೇನಿಲ್ಲ; ಆಳರಸರಿಗೆ ಅಂತಃಪುರ, ಹಾಳರಸರಿಗೆ ಅನೈತಿಕತೆ!

ಮೇಟಿ ಕೊಟ್ರಪ್ಪ, ಬಸರಕೋಡು

*ನಾವು ಕೇಳುವ ಕೊನೆಯ ಪ್ರಶ್ನೆ, ನೀವು ನೀಡುವ ಕಡೆಯ ಉತ್ತರ ಯಾವುದಿರಬಹುದು?*

ಹೀಗೆಂದು ಹೇಳಲಾಗದು; ನೀವೇ ನೋಡಿರುವಂತೆ ಪ್ರತಿ ವಾರವೂ ಕಡೆಯ ಪ್ರಶ್ನೆ ಮತ್ತು ಕಡೆಯ ಉತ್ತರಗಳು ಬದಲಾಗುತ್ತಿರುತ್ತವೆ!

■ ರಾಮ್